ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆ.ಇ.ಬಿ. ಹುದ್ದೆಗಳ ಖಾಲಿ ಕುರಿತು

43 ಎ - ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬೇಕಾದ ಸಾಮಾಗ್ರಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಪೂರೈಸದಿರಲು ಕಾರಣವೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯಗಳಿಗಾಗಿ ಬೇಕಾಗುವ ಸಾಮಗ್ರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ಮಂಡಳಿಯ ಪೂರೈಕೆ ಮಾಡುತ್ತಿದೆ. ಈ ಜಿಲ್ಲೆಯಲ್ಲಿರುವ ಮಂಡಳಿಯ ಮಂಗಳೂರು ಪುತ್ತೂರ ಮತ್ತು ಉಡುಪಿ ವಿಭಾಗಗಳು ಸಾಮಗ್ರಿಗಳಿಗಾಗಿ ಸಲ್ಲಿಸುವ ಬೇಡಿಕೆಗಳನ್ನು ಗಮನಿಸಿ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಕಾವೇರಿ ಜಲಾನಯನ ಪ್ರದೇಶಗಳಲ್ಲಿನ ಖರ್ಚು ಮಾಡಿರುವ ಹಣ

153 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳಿನರಸೀಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳಿಗೆ ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ;

ಆ) 1993-94 ರಲ್ಲಿ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಇ) ಡಿಸೆಂಬರ್ 1993 ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1993-94 ಸಾಲಿನಲ್ಲಿ ನಿಗದಿಪಡಿಸಿರುವ ಹಣ 278.11 ಕೋಟಿ ರೂ.ಗಳು (ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ)

ಆ) 134.13 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ)

ಇ) 122.83 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ) ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರ)

ಸೇಡಂ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಏತ ನೀರಾವರಿ ಯೋಜನೆ

202 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರುಕುಂಟ ಐಹಾಳ ಹಾಗೂ ಯಡಗ ಗ್ರಾಮದ ಏತ ನೀರಾವರಿ ಯೋಜನೆಗಳು ಸರ್ವೆ ಮಾಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆ ಯೋಜನೆಗಳು ಕಾಗಿನ ಏತ ನೀರಾವರಿ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಸಾಧ್ಯವಾಗುವುದಿಲ್ಲವೆಂದು ಮುಖ್ಯ ಅಭಿಯಂತರರು, ಜಲ ಸಂಪನ್ಮೂಲ ಸಂಸ್ಥೆಯವರು ತಿಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಲ ಸಂಪನ್ಮೂಲ ಸಂಸ್ಥೆಯವರು ತಮ್ಮ ಪತ್ರ ಸಂಖ್ಯೆ. 292:1, ದಿನಾಂಕ: 30-10-92 ರ ಸಂಗಡ ಕಳುಹಿಸಿರುವ ನಕಾಶೆಯನ್ನು ವೀಕ್ಷಿಸಿದರೆ ಯಡಗ ಗ್ರಾಮ ಹಾಗೂ ಆ ಗ್ರಾಮದ ಭೂಮಿ ಕಾಗಿನ ನೀರಾವರಿ ಪ್ರದೇಶದಲ್ಲಿ ಬರುವುದಿಲ್ಲವೆಂದು ಕಂಡು ಬರುವುದಕ್ಕೆ ತಪ್ಪು ಉತ್ತರವನ್ನು ನೀಡಿ ಸ್ಥಗಿತಗೊಳಿಸಲು ಕಾರಣವೇನು?

ಇ) ಈ ಯಡಗ ಏತ ನೀರಾವರಿ ಯೋಜನೆಯನ್ನು ಕೂಡಲೇ ಮಂಜೂರು ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿ ಕೊಡಲಾಗುವುದು?

ಈ) 2000, ಇಸವಿಯ ಒಳಗಾಗಿ ಆ ಕಾಗಿನ ನದಿ ಬೃಹತ್ ಪ್ರಮಾಣ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ ಈಗಾಗಲೇ ಕೆಲಸ ಪ್ರಾರಂಭ ಮಾಡಿದರೆ ಮಾತ್ರ ಕಾರ್ಯರೂಪಕ್ಕೆ ಬರುವುದಿಲ್ಲವೇ?

ಉ) ಒಂದು ವೇಳೆ ಆ ಯೋಜನೆ 2000 ಇಸವಿ ಒಳಗಾಗಿ ನಿರ್ಮಾಣ ಮಾಡದಿದ್ದರೆ ಕುರಕುಂಟ ಏಹಾಳ್‌ತೆಲಕೂರು ಹಾಗೂ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರಲಾರದ ಯಡಗ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಕುರುಕುಂಟ ಮತ್ತು ಏಹಾಳ್ ಏತ ನೀರಾವರಿ ಯೋಜನೆಗಳು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲೂ ಮತ್ತು ಯಡಗ ಏತ ನೀರಾವರಿ ಯೋಜನೆಯು ಕಾಗಿನ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲೂ ಬರುವುದರಿಂದ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಹೇಮಾವತಿ ಎಡದಂಡೆ ನಾಲೆಯ ದುರಸ್ತಿ

292 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂಡೆ ನಾಲೆಯ ಸರಪಳಿ 46.12 ರ ಕಿ.ಮೀ. ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ನಾಲೆ ಯಾವಾಗ ಒಡೆಯಿತು ಹಾಗೂ ಆದರಿಂದ ರೈತರಿಗೆ ಆಗಿರತಕ್ಕ ಅಂದಾಜು ನಷ್ಟವೆಷ್ಟು ;

ಇ) ಆ ನಾಲೆಯ ದುರಸ್ತಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು;

ಈ) 1993-94 ರ ಡಿಸೆಂಬರ್ ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಉ) ಆ ನಾಲೆಯ ದುರಸ್ತಿಗಾಗಿ ಒಟ್ಟು ತಗಲುವ ಅಂದಾಜು ವೆಚ್ಚವೆಷ್ಟು;

ಊ) ಆ ದುರಸ್ತಿ ಕೆಲಸವನ್ನು ಯಾವಾಗ ಮುಗಿಸಲಾಗುವುದು ;

ಋ) ರೈತರಿಗೆ ಆಗಿರುವ ನಷ್ಟಕ್ಕೆ ಸರ್ಕಾರದಿಂದ ನೀಡಿರುವ ಪರಿಹಾರದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ದಿನಾಂಕ 13-12-92 ರಂದು. ರೈತರಿಗೆ ಇದರಿಂದ 10.30 ಲಕ್ಷ ರೂ.ಗಳ ನಷ್ಟವಾಗಿರುತ್ತದೆ.

ಇ) ರೂ. 5.53 ಲಕ್ಷಗಳು.

ಈ) ರೂ.5.53 ಲಕ್ಷಗಳು.

ಉ) ರೂ. 5.53 ಲಕ್ಷಗಳು.